**ಸಾಮಾಜಿಕ ಜಾಲತಾಣದ ಸಾಧ್ಯತೆಗಳ ಕಟ್ಟಕಡೆಯ ಘಟ್ಟದಲ್ಲಿ ನಾವು ನಿಂತಿಲ್ಲ. ಇದರ ಸಂಪೂರ್ಣ ಸಾಧ್ಯತೆಗಳ ಅನಾವರಣದಲ್ಲಿ ಮಧ್ಯದಲ್ಲೆಲ್ಲೋ ತಾಕಲಾಡುತ್ತಾ ಇದ್ದೇವೆ.**

"ಈವತ್ತು ನೋಡಿದ್ಯಾ ಏನ್ ಬರೆದಿದಾಳೆ?"

"ಯಾರು?"

"ಅವಳೇ... ನಿನ್ ಫ್ರೆಂಡು!"

"ಅವಳ್ಯಾರೇ? ಎಲ್ಲಿ ಬರೆದಿದ್ದಾಳೆ?"

"ಅದೇ ಫೇಸ್‌ಬುಕ್ಕಲ್ಲಿ! ನೋಡಿಲ್ವಾ ನೀನು? ಆಹಹಹಹಹ ನೀನೂ ನಾಟ್ಕ ಮಾಡ್ತೀಯ!"

"ಇಲ್ಲ ಕಣವ್ವಾ ನಿಜ್ವಾಗ್ಲೂ ನೋಡಿಲ್ಲ. ಕೆಲಸ ಇತ್ತು... ಫೇಸ್‌ಬುಕ್ ಕಡೆ ತಲೆ ಕೂಡ ಹಾಕಿಲ್ಲ!"

"ಲೇ ಅವಳು ಹಂಗೇ ಅಂತ ನಿನಗೆ ನೂರು ಸಾರಿ ಹೇಳಿದೆ. ನೀನು ಕೇಳಲಿಲ್ಲ. ಈಗ ನೋಡು... ನನ್ನ ಮಾತೇ ನಿಜ ಆಯ್ತು. ಇನ್ನ್ ಮೇಲೆ ಅವಳನ್ನ ಮಾತಾಡಿಸೋದು ಬ್ಯಾಡ. ತಿಳೀತಾ?"

"ಆದರೆ ನಾವು ಅವಳನ್ನ ಮಾತೇ ಆಡಿಸಿಲ್ವಲ್ಲೇ!"

"ಏ ಥು! ಅವಳನ್ನ ಮುಖಾಮುಖಿ ಮಾತಾಡಿಸಬೇಕು ಅಂತ ಹೇಳಿದೆನಾ? ಅವಳ ಯಾವ ಸ್ಟೇಟಸ್‌ಗೂ ರೆಸ್ಪಾಂಡ್ ಮಾಡಬಾರದು, ಫೋಟೊಕ್ಕೆ ಲೈಕ್ ಕೂಡ ಹಾಕಬಾರದು... ಸುಮ್ಮನೆ ಇದ್ದುಬಿಡೋಣ. ಅವಳ ಸಾವಾಸ ಬ್ಯಾಡ..."

ವಾರ ಕಳಕೊಂಡು ಆ 'ಅವಳು' ಫೋನ್ ಮಾಡಿದಳು.

"ಯಾಕೆ? ನನ್ ಯಾವ್ ಫೋಟೊಕ್ಕೂ ಲೈಕೂ ಇಲ್ಲ, ಕಾಮೆಂಟೂ ಇಲ್ಲ?"

"ಇಲ್ಲ ಕಣೆ ಫೇಸ್‌ಬುಕ್ಕಿನ ಕಡೆ ಬಂದೇ ಇಲ್ಲ ನಾನು."

"ಅಹಹಹಹ ಅವಳ್ಯಾರೋ ರಾಜ್ಕೀಯ ಬರೆದರೆ ಇಷ್ಟುದ್ದ ಕತೆ ಹೊಡ್ದಿದೀಯ? ಅದಕ್ಕೆ ಟೈಮಿರುತ್ತೆ ಪಾಪ?"

"ಥೋ ಅದು ನಾನು ಬರೆಯುತ್ತಿದ್ದ ಲೇಖನಕ್ಕೆ ಸಂಬಂಧಪಟ್ಟಿದ್ದ ವಿಷಯ ಇತ್ತು. ಚೆನ್ನಾಗಿ ಬರೆದಿದ್ದಳು, ಅದಕ್ಕೆ"

"ಹೌದಮ್ಮಾ, ನಾವೆಲ್ಲಾ ಎಲ್ಲಿ ನಿಮ್ ತರಾ ಬುದ್ವಂತ್ರು; ನಾವ್ ನೋಡಿದ್ರೆ ಕಡಿಮೆ ಐಕ್ಳೂ ಜನ ನಿಮ್ ತರಾ ರಾಜ್ಕೀಯ ಎಲ್ಲಾ ಎಲ್ಲಿ ಬರಿಯೋಕೆ ಬರುತ್ತೆ, ಅದಕ್ಕೆ ನಮ್ ಬಗ್ಗೆ ಅಷ್ಟಕ್ಕಷ್ಟೆ."

"ಥೋ ಹಂಗನ್ನ ಬ್ಯಾಡ ಕಣೆ. ನೀನೂ ಬರೀತೀಯಲ್ಲ"

